## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ವತಿಯಿಂದ ಅಭಿವೃದ್ಧಿಪಡಿಸಿರುವ / ನಿರ್ಮಿಸಿರುವ ವಸತಿ ನಿವೇಶನ / ವಾಸದ ಮನೆಗಳನ್ನು (Tenements) ವಿಲೇವಾರಿ ಮಾಡಲು ಅಧಿಕಾರಯುಕ್ತ ಸಮಿತಿ ರಚಿಸುವ ಕುರಿತು.

ಓದಲಾಗಿದೆ: ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಇವರ ಕಡತ ಸಂಖ್ಯೆ: ಕೆಐಎಡಿಬಿ/ ಸಿಇಓ&ಇಎಂ/ ಪಿಎಸ್16/ 2020-21.

-- o --

ಪ್ರಸ್ತಾವನೆ :-

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ವತಿಯಿಂದ ಅಭಿವೃದ್ಧಿಪಡಿಸಿರುವ / ನಿರ್ಮಿಸಿರುವ ವಸತಿ ನಿವೇಶನ / ವಾಸದ ಮನೆಗಳನ್ನು (Tenements) ವಿಲೇವಾರಿ ಮಾಡುವ ಕುರಿತು ದಿನಾಂಕ 17.02.2020ರಂದು ನಡೆದ ಕೆ.ಐ.ಎ.ಡಿ.ಬಿ.ಯ 364ನೇ ಮಂಡಳಿ ಸಭೆಯಲ್ಲಿ ವಿವರವಾಗಿ ಚರ್ಚಿಸಿ, ವಸತಿ ನಿವೇಶನ / ವಾಸದ ಮನೆ / Tenements ಇವುಗಳ ಹಂಚಿಕೆಗೆ ಇರುವ ಮಾರ್ಗಸೂಚಿಗಳನ್ನು ಪರಿಷ್ಕರಿಸಲು ನಿರ್ಣಯಿಸಲಾಗಿದೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಸಭೆಯ ನಿರ್ಣಯದ ಮೇರೆಗೆ ಕೆ.ಐ.ಎ.ಡಿ.ಬಿ. ವತಿಯಿಂದ ಅಭಿವೃದ್ಧಿಪಡಿಸಿರುವ / ನಿರ್ಮಿಸಿರುವ ವಸತಿ ನಿವೇಶನ / ವಾಸದ ಮನೆಗಳನ್ನು (Tenements) ಪರಬಾರೆ ಮಾಡುವ ಸಂಬಂಧ ಕ್ರಮ ಕೈಗೊಳ್ಳಲು ಅನುವಾಗುವಂತೆ ಅಧಿಕಾರಿಗಳನ್ನೊಳಗೊಂಡ ಅಧಿಕಾರಯುಕ್ತ ಸಮಿತಿಯನ್ನು ರಚಿಸಲು ಅವಶ್ಯ ಕಂಡುಬಂದಿರುವುದರಿಂದ ಈ ಕೆಳಕಂಡ ಆದೇಶ:

**ಸರ್ಕಾರದ ಆದೇಶ ಸಂಖ್ಯೆ: ಸಿಐ 106 ಎಸ್.ಪಿಕ್ಯೂ(ಇ) 2020,**

**ಬೆಂಗಳೂರು, ದಿನಾಂಕ 06.06.2020.**

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ವತಿಯಿಂದ ಅಭಿವೃದ್ಧಿಪಡಿಸಿರುವ/ ನಿರ್ಮಿಸಿರುವ ವಸತಿ ನಿವೇಶನಗಳು/ ವಾಸದ ಮನೆಗಳ (Tenements) ವಿಲೇವಾರಿ ಮಾಡುವ ಸಂಬಂಧ ನಿವೇಶನ

ಹಾಗೂ ಮನೆಗಳನ್ನು ಹಂಚಿಕೆ ಮಾಡುವ ಬಗ್ಗೆ ಪರಿಶೀಲಿಸಲು ಈ ಕೆಳಕಂಡ ಅಧಿಕಾರಿಗಳನ್ನೊಳಗೊಂಡ ಅಧಿಕಾರಯುಕ್ತ ಸಮಿತಿಯನ್ನು ರಚಿಸಿ ಆದೇಶಿಸಲಾಗಿದೆ.

| | | |
|---|---|---|
| 1 | ಆಯುಕ್ತರು, ಕೈಗಾರಿಕಾಭಿವೃದ್ಧಿ<br>ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ | ಅಧ್ಯಕ್ಷರು |
| 2 | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ<br>ಕಾರ್ಯನಿರ್ವಾಹಕ ಸದಸ್ಯರು,<br>ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ | ಸದಸ್ಯರು |
| 3 | ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ಉದ್ಯೋಗ ಮಿತ್ರ | ಸದಸ್ಯರು |
| 4 | ಸಂಬಂಧಪಟ್ಟ ಮುಖ್ಯ ಇಂಜಿನಿಯರ್,<br>ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ | ಸಂಚಾಲಕರು<br>(Convener) |

ಈ ಸಮಿತಿಯು ದಿನಾಂಕ 17.02.2020ರಂದು ನಡೆದ ಕೆ.ಐ.ಎ.ಡಿ.ಬಿ.ಯ 364ನೇ ಮಂಡಳಿ ಸಭೆಯಲ್ಲಿ ಅನುಮೋದಿಸಿರುವ ಹಂಚಿಕೆ ಮಾರ್ಗಸೂಚಿಗಳ ಅನ್ವಯ ಈಗಾಗಲೇ ನಿವೇಶನ ಮತ್ತು ಮನೆಗಳ ಹಂಚಿಕೆ ಕೋರಿ ಅರ್ಜಿ ಸಲ್ಲಿಸಿರುವ ಅರ್ಜಿದಾರರ ಮನವಿಗಳನ್ನು ಪರಿಗಣಿಸಿ, ಹಂಚಿಕೆ ಮಾಡತಕ್ಕದ್ದು.

ನಿವೇಶನ ಹಾಗೂ ಮನೆಗಳು ಹಂಚಿಕೆಗೆ ಲಭ್ಯವಿರುವ ಕುರಿತು ನೂತನ ಅರ್ಜಿಗಳನ್ನು ಸ್ವೀಕರಿಸಲು ಪತ್ರಿಕಾ ಪ್ರಕಟಣೆಯನ್ನು ನೀಡುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಹಾಗೂ ಅವರ ಹೆಸರಿನಲ್ಲಿ

(ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ
ಸಚಿವರಿಂದ ಅನುಮೋದಿತ)

ಎನ್. ಕುಮಾರ್ 06/6/2020.

(ಎನ್. ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಇವರಿಗೆ:-

1. ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.

2. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯಕಾರಿ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಉದ್ಯೋಗ ಮಿತ್ರ, ಖನಿಜ ಭವನ, ರೇಸ್.ಕೋರ್ಸ್ ರಸ್ತೆ, ಬೆಂಗಳೂರು.
4. ಮುಖ್ಯ ಇಂಜಿನಿಯರ್-1, ಕೆ.ಐ.ಎ.ಡಿ.ಬಿ., ಖನಿಜ ಭವನ, ರೇಸ್.ಕೋರ್ಸ್ ರಸ್ತೆ, ಬೆಂಗಳೂರು.
5. ಮುಖ್ಯ ಇಂಜಿನಿಯರ್-2, ಕೆ.ಐ.ಎ.ಡಿ.ಬಿ., ಖನಿಜ ಭವನ, ರೇಸ್.ಕೋರ್ಸ್ ರಸ್ತೆ, ಬೆಂಗಳೂರು.
6. ಕಾರ್ಯದರ್ಶಿ-1, 2 & 3, ಕೆ.ಐ.ಎ.ಡಿ.ಬಿ., ಖನಿಜ ಭವನ, ರೇಸ್.ಕೋರ್ಸ್ ರಸ್ತೆ, ಬೆಂಗಳೂರು.
7. ಹೆಚ್ಚುವರಿ ಪ್ರತಿ / ಶಾಖಾ ರಕ್ಷಾ ಕಡತ.